ಇನ್ನಷ್ಟು ನುಚ್ಚು ಹಾಕಬೇಕಿತ್ತು. ನೋಡು ಬರೀ ಗಂಟು...' ಅಂತ ನಿತ್ಯ ತಕರಾರು ತೆಗೆಯುತ್ತಿದ್ದ ಅಪ್ಪನ ಮುಖವನ್ನೇ ದಿಟ್ಟಿಸುತ್ತ, ಸಣ್ಣ ಹುಡುಗ ಏನೂ ಹೇಳದೇ ತಿಂತಿರೋದು ಕಾಣಿಸ್ತಿಲ್ವ ಅಂತ ಸಣ್ಣಗೆ ಗದರಿ, ಕಣ್ಣಲ್ಲಿ ತುಂಬಿಕೊಂಡ ನೀರು ಕೆಳಕ್ಕೆ ಬೀಳದಂತೆ ಎಚ್ಚರವಹಿಸಿ ಮುಖ ತಿರುಗಿಸಿ ಸೆರಗಿಂದ ಒರೆಸಿಕೊಳ್ಳುತ್ತಿದ್ದ ಅವ್ವ, ಆ ಕಷ್ಟದ ದಿನಗಳಲ್ಲೂ ನಮ್ಮ ಹೊಟ್ಟೆ ತುಂಬಿಸಿದ ಅನ್ನಪೂರ್ಣೆ! ನಿದ್ದೆ ಬರುವ ತನಕ ಕೈಯಿಂದ ಕೆನ್ನೆಯ ಮೇಲೆ ಸಣ್ಣಗೆ ತಟ್ಟುತ್ತ, ಬಾಬಾ ಸಾಹೇಬರು ಓದುವಾಗ ಅನುಭವಿಸಿದ ಕಷ್ಟ, ಅವಮಾನಗಳ ಬಗ್ಗೆ ತಾನು ಕೇಳಿದ್ದನ್ನೆಲ್ಲ ಕಥೆಯಂತೆ ಹೇಳುತ್ತ ಅವರಂತೆ ಆಗುವ ಛಲ ತನ್ನಲ್ಲಿ ಕಡಿಮೆ ಆಗದಂತೆ ನೋಡಿಕೊಂಡಿದ್ದು ಖಂಡಿತವಾಗಿಯೂ ಸಣ್ಣ ವಿಷಯ ಅಲ್ಲ!

ನಿನ್ನ ಅಜ್ಜ ಓದಿದ್ದು ಬೀದಿ ದೀಪದ ಬೆಳಕಿನಲ್ಲಂತೆ. ನೀನು ಬೀದಿಯಲ್ಲಿ ಕೂತ್ಗಂಡು ಓದೋದು ಬೇಡ. ಮನೆಯಲ್ಲಿ ಲಾಟೀನು ಬೆಳಕಲ್ಲಿ ನಿದ್ದೆ ಬರೋತನಕ ಓದು. ಓದಬೇಕು ಅಂದರೆ ಮನಸ್ಸಿಗೆ ನಾಟಿ ಅಲ್ಲೇ ಉಳಿದುಬಿಡಬೇಕು ಅಂತಿದ್ರು. ಅಜ್ಜ ಸಾಯುವ ದಿನವೂ ಓದುತ್ತಲೇ ಇದ್ದರಂತೆ. ಸರಿಹೊತ್ತಿನ ತನಕ ಓದಿ, ಆಮೇಲೆ ಏನನ್ನೊ ಬರೆದು ಮುಗಿಸಿ ಮಲಗಿದರಂತೆ. ಮರುದಿನ ಏಳಲಿಲ್ಲವಂತೆ! ಅಷ್ಟೊಂದು ಓದಿದ್ರಿಂದ್ಲೇ ಅವರನ್ನು ಜನ ಬಾಬಾ ಸಾಹೇಬರು ಅಂತ ಕರೆದದ್ದು. ದೊಡ್ಡ ಪುಸ್ತಕಗಳನ್ನು ಎದೆಗೆ ಒತ್ತಿ ಹಿಡಿದುಕೊಂಡು ತಲೆ ಎತ್ತಿ ನಡೆಯುತ್ತ, ನಿನ್ನಂತಹ ಲಕ್ಷಾಂತರ ಹುಡುಗರಲ್ಲಿ ಓದುವ ಕನಸು ಬಿತ್ತಿದ ಪುಣ್ಯಾತ್ಮ ನಿನ್ನ ಅಜ್ಜ ಅಂತ ಅವ್ವ ಆಗಾಗ ಹೇಳುತ್ತಿದ್ದುದೂ ನೆನಪಾಯಿತು.

★★★

'ನಮ್ಮದು ಹೊಸೂರಿನ ಪಕ್ಕದಲ್ಲಿದ್ದ ಸಣ್ಣ ಊರು. ನಿನ್ನ ಸ್ವಂತ ಅಜ್ಜ, ಅಂದರೆ ನನ್ನ ಅಪ್ಪ ನನ್ನನ್ನೂ ಸ್ಕೂಲಿಗೆ ಸೇರಿಸಿದ್ದರು. ಅಣ್ಣಂದಿರ ಜತೆ ಸ್ಕೂಲಿಗೆ ಹೋಗಿ ಬರ್ತಾ ಇದ್ದೆ. ನಾನೂ ದೊಡ್ಡ ಓದು ಓದಬೇಕು ಅಂತ ಅಪ್ಪ ಆಸೆಪಟ್ಟಿದ್ದರು. ಆದರೆ, ಅಮ್ಮನಿಗೆ ಆರೋಗ್ಯ ಸರಿ ಇರಲಿಲ್ಲ, ಕ್ಷಯ. ಸದಾಕಾಲ ಮಲಗೇ ಇರೋಳು. ಮನೆಯಲ್ಲಿ ಬೇಯಿಸಿ, ಬಸಿಯೊ ಇನ್ನೊಂದು ಜೀವ ಇರಲಿಲ್ಲ ಅಂತ ಅಪ್ಪ ಸ್ಕೂಲು ಬಿಡಿಸಿದರು. ನಾನು ಓದಿದ್ದು ನಾಲ್ಕನೇ ಕ್ಲಾಸಿನವರೆಗೆ. ಅದೂ ತಮಿಳಿನಲ್ಲಿ. ಆ ಮೇಲೆ ಅಣ್ಣಂದಿರೇ ಮನೆಯಲ್ಲೇ ಪಾಠ ಹೇಳಿಕೊಟ್ಟರು. ನಾನು ಸ್ಕೂಲಿಗೆ ಹೋಗಿದ್ದರೆ ಈ ಅಜ್ಜನಂತೆ ದೊಡ್ಡ ಓದು ಓದ್ತಿದ್ದೆ...' ಅಂತ ಆತ್ಮವಿಶ್ವಾಸದಿಂದ ಹೇಳಿದ್ದಳು.

ಅಮ್ಮ ದಿನ ದಿನಕ್ಕೆ ಸವೆದು ಹೋಗ್ತಾ ಇದ್ಲು. ಅವಳದ್ದು ಒಂದೇ ಹಟ. ಸಾಯೋ ಮೊದಲು ನಿನ್ನ ಮದ್ವೆ ನೋಡಬೇಕು ಅಂತ. ಅಪ್ಪ ದೂರದ ಸಂಬಂಧಿಕರ ಹುಡುಗ ಅಂತ ನಿನ್ನಪ್ಪನ ಜತೆ ನನ್ನ ಮದುವೆ ಮಾಡಿಸಿ ಈ ಊರಿಗೆ ಕಳಿಸಿದರು. ಈ ಊರಿಗೆ ಬಂದಾಗ ನಂಗೆ ಕನ್ನಡ ಬರ್ತಿರಲಿಲ್ಲ. ಊರವರ ಜತೆ ಮಾತಾಡಿಕೊಂಡೇ ಕಲಿತೆ. ಎಷ್ಟೋ ವರ್ಷ ನಾನು ಕನ್ನಡ ಮಾತಾಡಿದರೂ ಅದು ತಮಿಳಿನಂತೆ ಕೇಳಿಸ್ತಾ ಇತ್ತಂತೆ!

ಅಮ್ಮ ಸತ್ತ ಮೇಲೆ ಅಪ್ಪ ಉತ್ಸಾಹ ಕಳಕೊಂಡರು. ಅಣ್ಣಂದಿರಿಬ್ಬರಿಗೂ ಮೇಷ್ಟ್ರ ಕೆಲ್ಸ ಸಿಕ್ತು. ಇಬ್ಬರೂ ಮದುವೆ ಆದ ಮೇಲೆ ಟೌನು ಸೇರಿದರು. ನನ್ನ ಮನೆಗೆ ಬಂದು ಇದ್ದುಬಿಡಿ ಅಂತ ದೊಡ್ಡಣ್ಣ ಒತ್ತಾಯ ಮಾಡಿದರೂ ಅಪ್ಪ ಹೋಗಲಿಲ್ಲ. ನಿನ್ನ ಅಜ್ಜ ಯಾರ ಹಂಗಿನಲ್ಲೂ ಇರಲಿಲ್ಲ. ನಿಂಗೆ ರಾಮಸ್ವಾಮಿ ಅಂತ ಹೆಸರಿಟ್ಟಿದ್ದೂ ಅವರೇ. ಅದು ಪೆರಿಯಾರ್ ರಾಮಸ್ವಾಮಿ ನಾಯಕರ ಹೆಸರು ಅಂತ ಹೇಳಿದ್ದರು. ಪೆರಿಯಾರ್ ಅಂದರೆ ದೊಡ್ಡವರು ಅಂತ. ನಿನ್ನಜ್ಜ ಹೊಸೂರಿನ ಚರ್ಚಿನಲ್ಲಿ ವಾಚ್ಮನ್ ಕೆಲಸಕ್ಕೆ ಸೇರಿಕೊಂಡರು. ಅವರು ಸ್ಕೂಲಿಗೆ ಹೋಗಿರಲಿಲ್ಲ. ಅದೆಂಗೋ ಅಲ್ಪಸ್ವಲ್ಪ ಓದಲು ಕಲಿತಿದ್ರು. ಬೇಸರ ಕಳೆಯಕ್ಕೆ ಅಂತ ಬೈಬಲ್ ಓದೋಕೆ ಶುರು ಮಾಡಿದ್ರಂತೆ. ಅಪ್ಪ ನಮ್ಮ ಧರ್ಮ ಬಿಡಲಿಲ್ಲ. ಏಸುಸ್ವಾಮಿಯ ಕರುಣೆ ಅಪ್ಪನ ಎದೆಯಲ್ಲಿ ದೊಡ್ಡದಾಗಿ ಬೆಳೆದು ಹೆಮ್ಮರವಾಯಿತು. ಕೊನೆಕೊನೆಗೆ ಇಡೀ ದಿನ ಬೈಬಲ್ ಓದ್ತಲೇ ಇದ್ದರಂತೆ! ಹಂಗೆ ಓದುತ್ತಲೇ ಉಸಿರು ನಿಲ್ಲಿಸಿದರಂತೆ!